ಇತ್ತು. ಅವನ ಮುಖ ನೋಡಿಯೇ ಅರ್ಥವಾಗಿತ್ತು ಸೀತಾರಾಮಯ್ಯನಿಗೆ.

"ಸರ್ ಕೇಸ್ ಸಾಲ್ವ್ ಆಯಿತಾ."

ರುದ್ರೇಶ್ ಉತ್ತರಿಸಲಿಲ್ಲ. ಅವನಿಗೆ ಅರಿವಿತ್ತು ಇಡೀ ಕೇಸ್‌ನಲ್ಲಿ ಯಾವುದೇ ಸಾಕ್ಷಿಗಳಿಲ್ಲ. ಕೇಸ್ ಕ್ಲೋಸ್ ಆಗಬೇಕಿದ್ದರೆ ಅದು ಕೊಲೆಗಾರನ ತಪ್ಪೊಪ್ಪಿಗೆಯಿಂದ ಮಾತ್ರ ಸಾಧ್ಯ ಅಂತ.

★★★

ಒಂದು ಗಂಟೆಯಿಂದ ಎಸಿಪಿ ರುದ್ರೇಶ್‌ನ ಚೇಂಬರ್‌ನಲ್ಲಿ ಕೂತಿದ್ದ ಜೀವನ್ ಮತ್ತು ಡಿಮೆಲೋ ಚಡಪಡಿಸತೊಡಗಿದ್ದರು. ಅವರನ್ನು ಹೊರಗೆಲ್ಲೂ ಹೋಗದಂತೆ, ತಾನು ಬರುವವರೆಗೂ ಅಲ್ಲಿಯೇ ಕೂರಿಸಿರಬೇಕೆಂದು ಎಸಿಪಿ ರುದ್ರೇಶ್ ಆಜ್ಞಾಪಿಸಿ ಹೋಗಿದ್ದ. ಅವನ ಮಾತನ್ನು ಪಾಲಿಸಲು, ಒಬ್ಬ ಕಾನ್‌ಸ್ಟೆಬಲ್ ಅಷ್ಟೂ ಹೊತ್ತು ಅವರ ಮುಂದೆಯೇ ನಿಂತಿದ್ದ. ಅವರಿಬ್ಬರಿಗೂ ಮಾತಾಡಿಕೊಳ್ಳಲೂ ಬಿಡದಂತೆ ಅವರನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದ. ಇಬ್ಬರಿಗೂ, ತಾವು ಅಲ್ಲಿಗೆ ಯಾಕೆ ಬಂದಿದ್ದೇವೆ ಎನ್ನುವ ಅರಿವೂ ಇರಲಿಲ್ಲ. ಒಳಗಿನ ಭಯ, ಬೆವರಿನ ರೂಪದಲ್ಲಿ ಅವರ ಕಿವಿಯ ಪಕ್ಕದಿಂದ ಇಳಿಯುತ್ತಿತ್ತು. ಆಗಲೇ ಇಬ್ಬರೂ ನಾಲ್ಕು ಲೋಟ ನೀರು ಕುಡಿದಿದ್ದರು.

